# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು.

**ಸಿ.ಸಿ.ಸಂಖ್ಯೆ 35/2024**

| | |
|---|---|
| ಫಿರ್ಯಾದುದಾರರುಃ | ಸರ್ಕಾರದ ಪರ ಕರ್ನಾಟಕ ಅಬಕಾರಿ ಇಲಾಖೆ,<br>ಹುಣಸೂರು ಉಪವಲಯ, ಹುಣಸೂರು,<br>ಮೈಸೂರು ಜಿಲ್ಲೆ. |
| | ವಿರುದ್ಧ |
| ಆರೋಪಿಃ | ಸತೀಶ್ @ ಸತೀಶಗೌಡ ಬಿನ್ ಸ್ವಾಮಿಗೌಡ,<br>ಸುಮಾರು 36 ವರ್ಷ,<br>ವಾಸಃ ಮೈಲಾಂಬೂರು ಗ್ರಾಮ,<br>ಗಾವಡಗೆರೆ ಹೋಬಳಿ,<br>ಹುಣಸೂರು ತಾಲ್ಲೂಕು. |

## ದೋಷಾರೋಪಣೆ

ಶ್ರೀಮತಿ. ಜೈಬುನ್ನಿಸಾ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 01.05.2023 ರಂದು ಆರೋಪಿಯಾದ ನೀವು ಹುಣಸೂರು – ಕೆ ಆರ್ ನಗರ ಮುಖ್ಯ ರಸ್ತೆಯ ಹುಣಸೂರು ಪಟ್ಟಣ ಪೊಲೀಸ್ ಠಾಣೆ ಸರಹದ್ದು ಮುಕ್ತಾಯ ಎಂಬ ನಾಮಫಲಕ ಇರುವ ಬೋರ್ಡ್ ಮುಂಭಾದಲ್ಲಿ ನೀವು ನಿಮ್ಮ ದ್ವಿಚಕ್ರ ವಾಹನ ಕೆಎ–45–ಹೆಚ್ – 8410 ಹೀರೋ ಹೊಂಡಾ ಸ್ಪೆಂಡರ್ ಪ್ಲಸ್ ಬೈಕಿನ ಪೆಟ್ರೋಲ್ ಟ್ಯಾಂಕ್ ನ ಮೇಲೆ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಅಕ್ರಮವಾಗಿ 90 ಮಿಲಿ ಸಾಮರ್ಥ್ಯದ 50 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಯಾವುದೇ ಲೈಸೆನ್ಸ್ ರಹದಾರಿ ಅಥವಾ ಬಿಲ್ ಇಲ್ಲದೆ ಚುನಾವಣಾ ಸಮಯದಲ್ಲಿ ಮಾರಾಟ ಮಾಡಿ ಹಣ ಸಂಪಾದಿಸುವ ಉದ್ದೇಶದಿಂದ ಅಕ್ರಮವಾಗಿ ಸಾಗಾಣಿಕೆ ಮಾಡಿರುತ್ತೀರಿ. ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 11, 13, 14,

15ಹಾಗೂ 32(1), 38(ಎ), 43 ರಡಿಯಲ್ಲಿ ದಂಡನೀಯ ಅಪರಾಧವಾಗಿದ್ದು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿದ್ದು ಆರೋಪಿತರು ಕೊಟ್ಟ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢಿಕರಿಸುತ್ತೇನೆ.

ದಿನಾಂಕಃ 23.09.2024

**(ಜೈಬುನ್ನಿಸಾ)**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.